## ಕೆಮ್ಮಣ್ಣುಗುಂಡಿಯಲ್ಲಿ ಕಂಡ ಫಲಕಗಳು

ಕಣ್ಣು ಹಾಯಿಸಿದಷ್ಟಕ್ಕೂ ಕಾಣುವ ಹಸಿರು, ಸುತ್ತಲೂ ತಲೆ ಎತ್ತಿ ನಿಂತಿರುವ ಗಿರಿಶೃಂಗಗಳು, ವಸುಂಧರೆಗೆ ಮುತ್ತಿಡುವ ಇಬ್ಬನಿಯ ರಾಶಿ, ಹಿತಕರವಾದ ತಂಗಾಳಿಯನ್ನು ಸವಿಯುತ್ತಿರುವಾಗ 'ನನ್ನ ಹಸಿರಲಿ ನಿನ್ನ ಉಸಿರಿದೆ, ನಿನ್ನ ಉಸಿರಲಿ ನನ್ನ ಹಸಿರಿದೆ' ಎಂಬ ಫಲಕ ನಿಮ್ಮ ಕಣ್ಣಿಗೆ ಬಿದ್ದರೆ, ನಿಮ್ಮ ಮೈಮನಗಳೆರಡೂ ಉಲ್ಲಸಿತವಾಗುತ್ತದೆಯಲ್ಲವೇ? ಇದು ಕಾಣಸಿಗುವುದು ಕರ್ನಾಟಕದ ಸುಪ್ರಸಿದ್ಧ ಗಿರಿಧಾಮ ಚಿಕ್ಕಮಗಳೂರು ಜಿಲ್ಲೆಯ ಕೆಮ್ಮಣ್ಣುಗುಂಡಿಯಲ್ಲಿ. ಇಲ್ಲಿನ ಕೃಷ್ಣರಾಜೇಂದ್ರ ಗಿರಿಧಾಮದಲ್ಲಿ ಗುಲಾಬಿ ಹೂದೋಟದಲ್ಲಿ, ಪ್ರಕೃತಿ ಸೌಂದರ್ಯವನ್ನು ಅಕ್ಷರಗಳಲ್ಲಿ ಅನನ್ಯವಾಗಿ ಹಿಡಿದಿಟ್ಟ ರಸಋಷಿ ಕುವೆಂಪು, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಮೊದಲಾದ ಕವಿಗಳ ನುಡಿಗಳ ಫಲಕಗಳನ್ನು ಹಾಕಿದ್ದಾರೆ.

ಗಿರಿಧಾಮದ ಪ್ರವೇಶದಲ್ಲೇ ಕುವೆಂಪು ಅವರ 'ಹೂವುದೇವರು' ಕವಿತೆಯ ಸಾಲು, ಹಾಗೆಯೇ 'ಹಸಿರು ತರುರಾಶಿ ಚೈತ್ರಯಾತ್ರೆಗೆ ಬಂದು ನಿಂತ ನೂರು ಚೆಲುವಿನ ರಥಗಳು' ಎಂಬ ಜಿ.ಎಸ್.ಎಸ್ ರವರ ಅದ್ಭುತ ಸಾಲುಗಳು ಮನದಲ್ಲಿ ಅಚ್ಚಳಿಯದೇ ಉಳಿಯುತ್ತವೆ.

—ಎಚ್.ಎಸ್. ನವೀನಕುಮಾರ್ ಹೊಸದುರ್ಗ




## ಪಡಿ ಮಂಚ

ದಶಕಗಳ ಹಿಂದೆ ಕೃಷಿಕರು ರಟ್ಟೆಯ ಶಕ್ತಿಯನ್ನುಪಯೋಗಿಸಿ ದಿನಪೂರ್ತಿ ದುಡಿಯುತ್ತಿದ್ದರು. ಭತ್ತ ಕೊಯ್ಲುಮಾಡಿ ಒಟ್ಟುಗೂಡಿಸಿದ ಫಸಲನ್ನು ಈ ಪಡಿಮಂಚದ ಮೇಲೆ ಎತ್ತಿ ಬಡಿಯುತ್ತಿದ್ದರು. ಕೆಳಗೆ ಭತ್ತ ಶೇಖರಣೆಯಾಗುತ್ತಿತ್ತು ಮತ್ತು ಭತ್ತದಿಂದ ಬೇರ್ಪಡೆಗೊಂಡ ಹುಲ್ಲನ್ನು ರಾಶಿ ಹಾಕಿ ವ್ಯವಸ್ಥಿತವಾಗಿ ಸಂಗ್ರಹಿಸಿ ಜಾನುವಾರುಗಳಿಗೆ ಮೇವಾಗಿ ಬಳಸಲಾಗುತ್ತಿತ್ತು.

ಇಂದು ಕೃಷಿ ಕ್ಷೇತ್ರವೂ ಯಾಂತ್ರೀಕೃತಗೊಂಡು ಯಂತ್ರಗಳೇ ಭತ್ತ ಬೇರ್ಪಡಿಸುತ್ತಿವೆ. ಹುಲ್ಲು ತ್ಯಾಜ್ಯವಾಗುತ್ತಿದೆ. ಉಳ್ಳವರು ಮಾತ್ರ ಕೃಷಿ ವ್ಯವಸಾಯ ಮಾಡಿಕೊಂಡಿದ್ದಾರೆ. ಮಿಕ್ಕವರು ಇರುವ ಕೃಷಿಭೂಮಿಯನ್ನೂ ಪಾಳುಬಿಟ್ಟಿದ್ದಾರೆ. ದನ, ಕರು, ಎತ್ತು, ಎಮ್ಮೆಗಳನ್ನು ಕಸಾಯಿಖಾನೆಗೆ ತಳ್ಳುತ್ತಿದ್ದಾರೆ!

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ





## ಮರಕಿಂಡಿ!

ತೆಂಗಿನಮರ ಹತ್ತಾರು ವರುಷ ಕಳೆದರೂ ಫಲ ನೀಡದೇ ಇದ್ದರೆ ಅದರ ಕಾಂಡವನ್ನು ನಾಮದ ಆಕಾರದಲ್ಲಿ ಕೊರೆದು ಕಿಂಡಿ ಮಾಡುವುದನ್ನು ಈಗಲೂ ನೋಡುತ್ತೇವೆ. ನಮ್ಮ ಕರಾವಳಿಯ ಅನೇಕ ಹಳ್ಳಿಗಳಲ್ಲಿ ತೆಂಗಿನ ಮರವನ್ನೇ ಸುತ್ತುವರಿದು ಬೇಸಿಗೆಯ ಬಚ್ಚಲು ಮನೆ ಮಾಡಿದಾಗ ಈ ತೆಂಗಿನ ಮರದ ಕಿಂಡಿಯಲ್ಲಿಯೇ ಸಾಬೂನು ಇಡುವದನ್ನು ಕಾಣುತ್ತೇವೆ.

ಆದರೆ ಇದು ಊರಂಚಿನ ಕಾಡಿನಲ್ಲಿರುವ ಮತ್ತಿ ಮರ. ಇದರ ಕಾಂಡವನ್ನು ಫಲ ಬಿಡಲಿಲ್ಲವೆಂದು ಯಾರು ಕೊರೆಯಲಿಲ್ಲ. ನಿಸರ್ಗದ ನೆರಳಿನಲ್ಲಯೇ ಆದ ಈ ಕಿಂಡಿ ಮಕ್ಕಳ ಬಾಯಲ್ಲಿ ಮರಕಿಂಡಿಯಾಗಿ ಆವರಿಗೆ ಆಟ ಆಡಲು ಅನುಕೂಲವಾಗಿದೆ.

ಈ ಮರ ಕಿಂಡಿಯನ್ನು ಯಲ್ಲಾಪುರ ತಾಲ್ಲೂಕಿನ ಕಂಪ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡಿನಲ್ಲಿ ಕಾಣಬಹುದು!

—ಬೀರಣ್ಣ ನಾಯಕ ಮೊಗಟಾ ಯಲ್ಲಾಪುರ